JANUARY 23, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮುಕ್ತ, ದೂರ ಶಿಕ್ಷಣ ವ್ಯವಸ್ಥೆ, ರಾಷ್ಟ್ರೀಯ ಆದ್ಯತೆಗಳನ್ನು ಬೆಸೆಯುವ ಕೊಂಡಿ; ರಾಜ್ಯಪಾಲರ, ಅಭಿಮತ.
- ಗಣರಾಜ್ಯೋತ್ಸವ; ಕೆಂಪುಕೋಟೆಯ, ಭಾರತ ಪರ್ವದಲ್ಲಿ, ರಾಜ್ಯದಿಂದ, 'ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ' ಸ್ತಬ್ಧಚಿತ್ರ, ಪ್ರದರ್ಶನ.
- ಪ್ರಗತಿ @ 50 ಪ್ರಕಲ್ಪ; ರಾಷ್ಟ್ರೀಯ ಮೂಲಸೌಕರ್ಯ ಯೋಜನೆಗಳಲ್ಲಿ, ಕರ್ನಾಟಕಕ್ಕೆ ಸಿಂಹ ಪಾಲು.
- ಇಂದು, ನೇತಾಜಿ ಸುಭಾಷಚಂದ್ರ ಬೋಸ್, ಜಯಂತಿ; ಶೌರ್ಯ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಭಾರತ, 18 ಮುಕ್ತ ವಿಶ್ವವಿದ್ಯಾಲಯಗಳಿಗೆ ನೆಲೆಯಾಗಿದ್ದು, ವಿಶ್ವದ ಅತೀ ದೊಡ್ಡ ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಗಳಲ್ಲಿ ಒಂದಾಗಿದೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಶ್ಲಾಘಿಸಿದ್ದಾರೆ. ಮೈಸೂರಿನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಅಖಿಲ ಭಾರತ ಮುಕ್ತ ವಿಶ್ವವಿದ್ಯಾಲಯಗಳ, ಉಪ ಕುಲಪತಿಗಳ ಸಮ್ಮೇಳನ ಆಯೋಜಿಸಿದ್ದು, 'ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ, ಮುಕ್ತ ಮತ್ತು ದೂರಶಿಕ್ಷಣ; ಮುಕ್ತ ವಿಶ್ವವಿದ್ಯಾಲಯ ವಿಧಾನ' ವಿಷಯದ, ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ, ಶಿಕ್ಷಣವನ್ನು ರಾಷ್ಟ್ರೀಯ ಆದ್ಯತೆಗಳೊಂದಿಗೆ ಜೋಡಿಸಿ, ಉದಯೋನ್ಮುಖ ಜಾಗತಿಕ ಮತ್ತು ತಾಂತ್ರಿಕ ಸವಾಲುಗಳಿಗೆ, ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ, ಡಿಜಿಟಲ್, ಕೃತಕ ಬುದ್ಧಿಮತ್ತೆ ಹಾಗೂ ವರ್ಚುವಲ್ ಪ್ರಯೋಗಾಲಯಗಳಿಗೆ, ವಿಶ್ವವಿದ್ಯಾಲಯಗಳು ಅವಕಾಶ ಕಲ್ಪಿಸುತ್ತಿರುವುದು, ವಿಶೇಷ ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ಗ್ರಾಮೀಣ ವಿಭಾಗದ, ಕುರಡಿಕೇರಿ ಸರ್ಕಾರಿ ಪ್ರೌಢ ಶಾಲೆಯ ಇಬ್ಬರು ವಿದ್ಯಾರ್ಥಿಗಳು, ನ್ಯಾಶನಲ್ ಸೈನ್ಸ್ ಸೊಸಾಯಿಟಿ ಆಫ್ ಇಂಡಿಯಾ, ಗುಜರಾತ ರಾಜ್ಯದ ರಾಜಕೋಟ್‌ದಲ್ಲಿ ಸಂಘಟಿಸಿದ್ದ, ಭಾರತೀಯ ವಿಜ್ಞಾನ ಮತ್ತು ಅಭಿಯಾಂತ್ರಿಕ ಮೇಳದಲ್ಲಿ, 'ಉತ್ತಮ ಮಾದರಿ; ಗೌರವ ಉಲ್ಲೇಖ' ಪುರಸ್ಕಾರಕ್ಕೆ, ಭಾಜನರಾಗಿದ್ದಾರೆ. ಪ್ರಾಯೋಗಿಕ ಮಾದರಿಯನ್ನು ತಯಾರಿಸುವಲ್ಲಿ, ಮಾರ್ಗದರ್ಶನ ಮಾಡಿದ, ಶಾಲೆಯ ವಿಜ್ಞಾನ ವಿಷಯ ಶಿಕ್ಷಕಿ, ರಾಜಶ್ರೀ ಬೀಡಿ ಪ್ರದೇಶ ಸಮಾಚಾರಕ್ಕಾಗಿ, ರಾಜಕೋಟದಿಂದ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ರಾಜಶ್ರೀ ಬೀಡಿ ಧ್ವನಿ 44 ಸೆಕೆಂದುಗಳು

<><><>

ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ, 247 ಕೋಟಿ ರೂಪಾಯಿ ವೆಚ್ಚದಲ್ಲಿ, ಒಟ್ಟು 650 ಬಿ.ಎಸ್. 6 ಸರಣಿಯ ಬಸ್ ಗಳನ್ನು ಖರೀದಿಸಲು, ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ. ಆ ಪೈಕಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಹಾಗೂ ವಾಯವ್ಯ ಸಾರಿಗೆ ನಿಗಮಕ್ಕೆ 150 ಬಸ್ ಗಳನ್ನು ಅನುಮೋದಿಸಲಾಗಿದೆ.  ಧಾರವಾಡ ಜಿಲ್ಲೆ ಹುಬ್ಬಳ್ಳಿ, ಅಣ್ಣಿಗೇರಿ ಮತ್ತು ಕುಂದಗೋಳ ತಾಲೂಕಿನ ಗ್ರಾಮಗಳ, ಒಟ್ಟು 29 ಕೆರೆಗಳಿಗೆ ನೀರು ತುಂಬಿಸಲು, ಬೆಣ್ಣಿ ಹಳ್ಳದ ಉಪ ಹಳ್ಳವಾದ ದೊಡ್ಡ ಹಳ್ಳದಿಂದ ನೀರೆತ್ತಲು, 220 ಕೋಟಿ 60 ಲಕ್ಷ ರೂಪಾಯಿ ಮೊತ್ತದ ಯೋಜನೆ, ಕೊಪ್ಪಳ ಜಿಲ್ಲೆ ತಳಕಲ್‌ನಲ್ಲಿ, ಬಹು ಕೌಶಲಾಭಿವೃದ್ಧಿ ಕೇಂದ್ರದ, ಎರಡನೇ ಹಂತದ ನಿರ್ಮಾಣ ಕಾಮಗಾರಿಯನ್ನು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅನುದಾನದಲ್ಲಿ, 66 ಕೋಟಿ 75 ಲಕ್ಷ ರೂಪಾಯಿ ಮೊತ್ತದಲ್ಲಿ ಕೈಗೊಳ್ಳಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯ, ಸಂಪುಟ ಸಭೆ, ಅನುಮೋದಿಸಿದೆ.

<><><>

ರಾಷ್ಟ್ರೀಯ ಮೂಲಸೌಕರ್ಯ ಪರಿದೃಶ್ಯದಲ್ಲಿ, ಕರ್ನಾಟಕ ರಾಜ್ಯ, ಮಹತ್ವದ ಯೋಜನೆಗಳನ್ನು ಪಡೆದ, ಗರಿಮೆ ಹೊಂದಿದೆ. ಪ್ರಗತಿ @ 50 ಪ್ರಕಲ್ಪದಡಿ, ಪ್ರೊಜೆಕ್ಟ್ ಮಾನಿಟರಿಂಗ್ ಗ್ರುಪ್ ಪೋರ್ಟಲ್‌ನಲ್ಲಿ, ಕರ್ನಾಟಕಕ್ಕೆ, 6 ಲಕ್ಷ 48 ಸಾವಿರದ 436 ಕೋಟಿ ರೂಪಾಯಿಗಳ, ಸಂಚಿತ ಹೂಡಿಕೆಯನ್ನು ಒಳಗೊಂಡ, 187 ಯೋಜನೆಗಳ ಮೇಲ್ವಿಚಾರಣೆ, ಕೇಂದ್ರ  ಮಾಡುತ್ತಿದೆ. ರಾಷ್ಟ್ರೀಯ ಸಂಪರ್ಕ, ಇಂಧನ ವ್ಯವಸ್ಥೆ, ಕೈಗಾರಿಕಾ ಅಭಿವೃದ್ಧಿ ಮುಂತಾದ, ಕ್ಷೇತ್ರಗಳನ್ನು, ಮೂಲಸೌಕರ್ಯ ಅಭಿವೃದ್ಧಿ ಯೋಜನೆ, ಬಲ ಪಡಿಸಲಿದೆ.

<><><>

ರಾಜ್ಯ ಸರ್ಕಾರ, ತನ್ನ ಪೂರ್ವಭಾವಿ ಸೌಲಭ್ಯಗಳಾದ, ಭೂ ಸ್ವಾಧೀನ, ಶಾಸನ ಬದ್ಧ ಅನುಮತಿ ಮತ್ತು ಸಕಾಲಿಕವಾಗಿ, ಯೋಜನೆ ಕಾರ್ಯಗತಗೊಳಿಸುವಿಕೆಯ, ಬದ್ಧತೆಯಿಂದ, ಅಂತರ್ ಇಲಾಖೆ ಸಮನ್ವಯ, ಸಹಕಾರಿಯಾಗಿದೆ.

<><><>

ರಾಜ್ಯದ ಒಟ್ಟು 187 ಮೂಲಸೌಕರ್ಯ ಯೋಜನೆಗಳಲ್ಲಿ, 1 ಲಕ್ಷ 14 ಸಾವಿರದ 283 ಕೋಟಿ ರೂಪಾಯಿ ಹೂಡಿಕೆಯಾಗಿದೆ. 53 ಮಹತ್ವದ ಯೋಜನೆಗಳು, ಕಾರ್ಯಗತಗೊಂಡಿವೆ. 5 ಲಕ್ಷ 34 ಸಾವಿರದ 153 ಕೋಟಿ ರೂಪಾಯಿ ಮೌಲ್ಯದ, 134 ಯೋಜನೆಗಳು, ಪ್ರಸ್ತುತ ಅನುಷ್ಟಾನಗೊಳ್ಳುತ್ತಿವೆ.

<><><>

ನಿಯೋಜಿತ ಬಂಡವಾಳವನ್ನು, ರಸ್ತೆ, ಹೆದ್ದಾರಿಗೆ ಸಂಬಂಧಿಸಿದ, 13 ಯೋಜನೆಗಳು, ತೈಲ ಮತ್ತು ಅನಿಲ ಕ್ಷೇತ್ರಕ್ಕೆ ಸಂಬಂಧಿಸಿದ, 12 ಯೋಜನೆಗಳು ಮತ್ತು ರೇಲ್ವೆ ಇಲಾಖೆಯ, 8 ಯೋಜನೆಗಳಿಗೆ, ವಿನಿಯೋಗಿಸಲಾಗಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತದ ನವೋದ್ಯಮದ ರಾಜಧಾನಿ ಎಂಬ,ಹೆಗ್ಗಳಿಕೆಗೆ ಪಾತ್ರವಾಗಿರುವ, ಕರ್ನಾಟಕ, ಗಣರಾಜ್ಯೋತ್ಸವದ ಅಂಗವಾಗಿ, ಹೊಸ ದಿಲ್ಲಿಯ ಕೆಂಪುಕೋಟೆಯಲ್ಲಿ ಆಯೋಜಿತ, ಭಾರತ ಪರ್ವದಲ್ಲಿ, 'ಸಿರಿಧಾನ್ಯದಿಂದ ಮೈಕ್ರೊ ಚಿಪ್ ವರೆಗೆ' ಧ್ಯೇಯದ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ, ಹೇಮಂತ ನಿಂಬಾಳ್ಕರ ಮಾಹಿತಿ ನೀಡಿ, ಭಾರತವನ್ನು ಆತ್ಮ ನಿರ್ಭರ ರಾಷ್ಟ್ರವನ್ನಾಗಿಸುವ ದಿಸೆಯಲ್ಲಿ, ರಾಜ್ಯದ ಸಂಶೋಧನೆ, ನಾವಿನ್ಯತೆ ಹಾಗೂ ಕೌಶಲಾಭಿವೃದ್ಧಿ ಮತ್ತು ಯುವ ಜನತೆಗೆ ಉದ್ಯಮಶೀಲತೆ ಅವಕಾಶಗಳನ್ನು ಒದಗಿಸಿದ, ಸಾಧನೆಯ ಪ್ರತಿಬಿಂಬವಾಗಿ, ಸ್ತಬ್ಧಚಿತ್ರ ಪ್ರದರ್ಶನಗೊಳ್ಳಲಿದೆ, ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಬೆಂಗೇರಿ ಖಾದಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ, 2 ಕೋಟಿ ರೂಪಾಯಿ ಮೌಲ್ಯದ ರಾಷ್ಟ್ರ ಧ್ವಜಗಳು ಮಾರಾಟವಾಗದೇ ಉಳಿದಿದ್ದು, ಮೂರು ಆಯಾಮಗಳಲ್ಲಿ, ವಿಶೇಷ ಅಭಿಯಾನ ಆಯೋಜಿಸಲಾಗಿದೆ ಎಂದು, ಖಾದಿ ರಾಷ್ಟ್ರ ಧ್ವಜ ಉತ್ತೇಜನಾ ಅಭಿಯಾನದ ಸಂಯೋಜಕ, ಸಂತೋಷ ನರಗುಂದ ತಿಳಿಸಿದ್ದಾರೆ. ಭಾರತೀಯ ಮಾನಕ ಬ್ಯೂರೋದ, ಧ್ವಜ ಸಂಹಿತೆ ಆಧರಿಸಿ ರೂಪಿತ, ರಾಷ್ಟ್ರ ಧ್ವಜ, ಇ-ಕಾಮರ್ಸ್ ಮೂಲಕ, ಆನ್ಲೈನ್‌ನಲ್ಲಿ ಮಾರಾಟಕ್ಕೆ ವ್ಯವಸ್ಥೆ ಮತ್ತು ಪಾಲಿಸ್ಟರ್ ಧ್ವಜ ಮಾರಾಟದ ವಿರುದ್ಧ, ವಕಾಲತ್ತು ವಹಿಸಲಾಗುವುದು, ಸಂತೋಷ ನರಗುಂದ ಮಾಹಿತಿ ನೀಡಿದ್ದಾರೆ.

<><><>

ಸಂತೋಷ ನರಗುಂದ ಧ್ವನಿ 60 ಸೆಕೆಂದುಗಳು

<><><>

ಗಣರಾಜ್ಯೋತ್ಸವದ ಹಿನ್ನೆಲೆ, ರಾಜ್ಯ ಸರ್ಕಾರ, ರಾಷ್ಟ್ರ ಧ್ವಜ ತಯಾರಿಸುವ ನೇಕಾರರಿಗೆ, 130 ಕೋಟಿ ರೂಪಾಯಿ, ಪ್ರೋತ್ಸಾಹ ಧನ ಬಾಕಿ ಬಿಡುಗಡೆ ಮಾಡಬೇಕು ಎಂದು, ಖಾದಿ ರಾಷ್ಟ್ರ ಧ್ವಜ ಉತ್ತೇಜನಾ ಅಭಿಯಾನದ ಪದಾಧಿಕಾರಿಗಳು, ಆಗ್ರಹಿಸಿದ್ದಾರೆ.

<><><>

ನೇತಾಜಿ ಸುಭಾಷಚಂದ್ರ ಬೋಸ್, ಜಯಂತ್ಯುತ್ಸವದ ಹಿನ್ನೆಲೆ, ಇಂದು, ಶೌರ್ಯ ದಿನ ಆಚರಿಸಲಾಗುತ್ತಿದೆ. ನೇತಾಜಿ 1897, ಜನೆವರಿ 23 ರಂದು, ಒರಿಸ್ಸಾದ ಕಟಕ್‌ನಲ್ಲಿ ಜನಿಸಿದರು. ಸ್ವಾತಂತ್ರ್ಯ ಸೇನಾನಿ, ನೇತಾಜಿ ಅವರ ಜನ್ಮದಿನವನ್ನು, ದೇಶಾದ್ಯಂತ, 'ಪರಾಕ್ರಮ್ ದಿವಸ್' ಎಂದು ಶ್ರದ್ಧಾ, ಭಕ್ತಿಯಿಂದ ಆಯೋಜಿಸಲಾಗಿದೆ. ರಾಷ್ಟ್ರೀಯ ಹಿಂದ್ ಫೌಜ್ ಕಟ್ಟಿ, ಬ್ರಿಟಿಷರ ವಿರುದ್ಧದ ನಿರ್ಣಾಯಕ ಹೋರಾಟದಲ್ಲಿ ಹಾಗೂ ಎರಡನೇ ಮಹಾ ಯುದ್ಧದಲ್ಲಿ ಪಾಶ್ಚಿಮಾತ್ಯ ಶಕ್ತಿಗಳ ವಿರುದ್ಧ, ವಿದೇಶಿ ನೆಲದಿಂದ, ಭಾರತೀಯ ರಾಷ್ಟ್ರೀಯ ಪಡೆಗಳನ್ನು ಮುನ್ನಡೆಸಿದ ಹಿರಿಮೆ, ನೇತಾಜಿ ಅವರದ್ದಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ, ಖೇಲೋ ಇಂಡಿಯಾ ಹಾಗೂ ಫಿಟ್ ಇಂಡಿಯಾ ಉಪಕ್ರಮದಡಿ ಆಯೋಜಿತ, ಧಾರವಾಡ ಸಂಸದರ ಕ್ರೀಡಾ ಮಹೋತ್ಸವದ ಅಂಗವಾಗಿ, ಹುಬ್ಬಳ್ಳಿ-ಧಾರವಾಡ ಪಶ್ಚಿಮ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ, ಧಾರವಾಡ ಮಹಾನಗರ ಕ್ರೀಡಾ ಮಹೋತ್ಸವಕ್ಕೆ, ಇಂದು ಬೆಳಗ್ಗೆ 10 ಗಂಟೆಗೆ, ಕರ್ನಾಟಕ ಕಾಲೇಜು ಮೈದಾನದಲ್ಲಿ, ಚಾಲನೆ ನೀಡಲಾಗುವುದು ಎಂದು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ತಿಳಿಸಿದ್ದಾರೆ. ಧಾರವಾಡದಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನೇತೃತ್ವದಲ್ಲಿ, ಎರಡು ದಿನಗಳ, ಸಂಸದರ ಕ್ರೀಡಾ ಮಹೋತ್ಸವ ಜರುಗಲಿದೆ. ತಂಡದ ಆಟಗಳಾದ, ಕಬಡ್ಡಿ, ಖೋಖೋ ಹಾಗೂ ವಾಲಿಬಾಲ್ ಸೇರಿದಂತೆ, ವಯಕ್ತಿಕ ಆಟಗಳಾದ ಓಟ, ಜಿಗಿತ ಮತ್ತು ಗುಂಡು ಎಸೆತದ, ಐದು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಕರ್ಷಕ ನಗದು ಬಹುಮಾನಗಳನ್ನು ವಿಜೇತರು ಪಡೆಯಲಿದ್ದಾರೆ, ಎಂದರು.

<><><>

ಧಾರವಾಡದ, ಶ್ರೀಮದ್ ಅಥಣಿ, ಮುರುಘೇಂದ್ರಮಹಾ ಶಿವಯೋಗಿಗಳ, 96ನೇ ಜಾತ್ರಾ ಮಹೋತ್ಸವದ ಅಂಗವಾಗಿ, ಇಂದು ಸಂಜೆ 4 ಗಂಟೆಗೆ, ರಥೋತ್ಸವ ನಡೆಯಲಿದೆ. ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿ ಮಠದ, ಶ್ರೀ ಅಲ್ಲಮಪ್ರಭು ಸ್ವಾಮೀಜಿ ಹಾಗೂ ಶ್ರೀ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಚಾಲನೆ ನೀಡಲಿದ್ದು, ಸಹಸ್ರಾರು ಜನ ಭಕ್ತಾದಿಗಳು, ಶ್ರದ್ಧಾ-ಭಕ್ತಿಯಿಂದ ಪಾಲ್ಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮುಕ್ತ, ದೂರ ಶಿಕ್ಷಣ ವ್ಯವಸ್ಥೆ, ರಾಷ್ಟ್ರೀಯ ಆದ್ಯತೆಗಳನ್ನು ಬೆಸೆಯುವ ಕೊಂಡಿ; ರಾಜ್ಯಪಾಲರ, ಅಭಿಮತ.
- ಗಣರಾಜ್ಯೋತ್ಸವ; ಕೆಂಪುಕೋಟೆಯ, ಭಾರತ ಪರ್ವದಲ್ಲಿ, ರಾಜ್ಯದಿಂದ, 'ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ' ಸ್ತಬ್ಧಚಿತ್ರ, ಪ್ರದರ್ಶನ.
- ಪ್ರಗತಿ @ 50 ಪ್ರಕಲ್ಪ; ರಾಷ್ಟ್ರೀಯ ಮೂಲಸೌಕರ್ಯ ಯೋಜನೆಗಳಲ್ಲಿ, ಕರ್ನಾಟಕಕ್ಕೆ ಸಿಂಹ ಪಾಲು.
- ಇಂದು, ನೇತಾಜಿ ಸುಭಾಷಚಂದ್ರ ಬೋಸ್, ಜಯಂತಿ; ಶೌರ್ಯ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>